ಕವಿತೆ



ಆರ್. ಸುಧೀಂದ್ರಕುಮಾರ್
ಕಲೆ: ರೂಪಶ್ರೀ ಕಲ್ಲಿಗನೂರು

# ಮುಟ್ಟಿಸಿಕೊಂಡವರು

ದಲಿತರ ಮನೆಗೆ
ಮಾನ್ಯ ಮುಖ್ಯಮಂತ್ರಿಗಳ ಭೇಟಿ
ಮಹಾನಗರದ ದಲಿತಕೇರಿಯಲ್ಲಿ
ಸಡಗರ ತುಂಬಿ

ದರ್ಶಿನಿಯಿಂದ ಬರಮಾಡಿಕೊಂಡ
ಬಿಸ್ಲೇರಿ
ಚಹ ಕಾಫಿ ಬಾದಾಮಿ ಹಾಲು
ಶುಗರ್‌ಲೆಸ್
ಪೇಪರ್ ಲೋಟದಲ್ಲಿ ಹಾಕಿ
ತುಸುವೇ ಮಾತು
ಮಾತಿಗೆ ತಲೆಯಾಡಿಸಿ
ಅಷ್ಟರಲ್ಲೇ
ಪ್ಲಾಸ್ಟಿಕ್ ತಟ್ಟೆಯಲ್ಲಿ
ದಲಿತರ ಮನೆಯ ಒಳಗಿನಿಂದಲೇ ಬಂದ
ಬೆಳಗಿನ ತಿಂಡಿಯನ್ನು ವಿತರಿಸಿ

ಶತಮಾನದ ಹಿಂಸೆ ಅವಮಾನವನ್ನು ಮರೆತು
ನಗುತ್ತಲೇ ದಲಿತರು
ರಸ್ತೆಯಂಚಿನವರೆಗೂ ಬಂದು
ಅತಿಥಿಗಳಿಗೆ ಕೈಮುಗಿದರು

ಕೈಗಳಿಗೆ ಗ್ಲೌಸು ಹಾಕಿಕೊಂಡು ಮುಟ್ಟಿದಂತೆ
ದಲಿತರ ಬದುಕನ್ನು ಮುಟ್ಟಬಹುದು
ಮುಟ್ಟುವುದು ರಾಜಕಾರಣಕ್ಕೆ ಸಲೀಸು
ಹೀಗೆ ಮುಟ್ಟಿಸಿಕೊಳ್ಳುವಷ್ಟು ಪಳಗಿಸಲಾಗಿದೆ ದಲಿತರನ್ನು

